**ಸಾಕ್ಷಿಯನ್ನು ದಿನಾಂಕಃ-23-01-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 5, 7, 8ನೇ ಪ್ರತಿವಾದಿ ಪರ ಶ್ರೀ.ಎ ವ್ಹಿ ಬಿ ವಕೀಲರಿಂದಃ-**

3ನೇ ಪ್ರತಿವಾದಿಯೊಂದಿಗೆ ನನ್ನ ಮದುವೆಯಾಗಿ 30 ವರ್ಷಗಳಾಗಿವೆ. ಯಾವ ವರ್ಷದಲ್ಲಿ ಆಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಮದುವೆಯಾದ 1 ವರ್ಷಕ್ಕೆ 1ನೇ ವಾದಿ ಜನಿಸಿರುತ್ತಾನೆ ಎಂದರೆ ಸಾಕ್ಷಿ ಮದುವೆಯಾದ 4 ವರ್ಷದಲ್ಲಿ ಜನಿಸಿದ್ದಾನೆ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸನ್ನು 58 ಎಂದು ನಮೂದಿಸಲಾಗಿದ್ದು ಅದು ಸರಿ ಇದೆ. ನಾನು 3ನೇ ಪ್ರತಿವಾದಿಯೊಂದಿಗೆ ಒಂದು ವರ್ಷ

ದಾಂಪತ್ಯ ಜೀವನ ನಡೆಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಒಂದು ವರ್ಷದ ದಾಂಪತ್ಯ ಜೀವನದಿಂದ 1ನೇ ವಾದಿ ಜನಿಸಿದ್ದಾನೆ ಎಂದರೆ ಸಾಕ್ಷಿ ಮದುವೆಯಾದ 4 ವರ್ಷದಲ್ಲಿ ಜನಿಸಿದ್ದಾನೆ ಎಂದು ಹೇಳುತ್ತಾರೆ. ಜಮಖಂಡಿಯ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ 3ನೇ ಪ್ರತಿವಾದಿ ಗುರವ್ವ ಎನ್ನುವವಳನ್ನು ಮದುವೆಯಾಗಿದ್ದಾನೆ ಎಂದು ಖಾಸಗಿ ಫಿರ್ಯಾದಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಫಿರ್ಯಾದಿಯನ್ನು 2018 ರಲ್ಲಿ ಸಲ್ಲಿಸಿದ್ದು ಅದರಲ್ಲಿ ನನ್ನ ಮದುವೆ 3ನೇ ಪ್ರತಿವಾದಿಯೊಂದಿಗೆ 35 ವರ್ಷಗಳ ಹಿಂದೆ ಆಗಿದೆ ಎಂದು ಬರೆಸಿದ್ದೇನೆ ಎಂದರೆ ನನಗೆ ಈಗ ನೆನಪಿಲ್ಲ. ಗುರವ್ವ ಇವಳು 3ನೇ ಪ್ರತಿವಾದಿಯ ಮೊದಲನೇ ಹೆಂಡತಿ ಎಂದರೆ ಸರಿಯಲ್ಲ. ಸದರಿಯವಳನ್ನು ನಾನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ಗುರವ್ವ ಮತ್ತು 3ನೇ ಪ್ರತಿವಾದಿಗೆ 3 ಜನ ಮಕ್ಕಳು ಎಂದರೆ ಸರಿ. ಸದರಿ ಮೂರು ಮಕ್ಕಳಲ್ಲಿ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 2018 ರ ಹಿಂದೆ ನಾನು ಮತ್ತು 3ನೇ ಪ್ರತಿವಾದಿ 15 ವರ್ಷಗಳ ಹಿಂದಿನಿಂದ ಬೇರೆ ವಾಸವಾಗಿದ್ದೇವೆ ಎಂದು ಖಾಸಗಿ ಫಿರ್ಯಾದಿಯಲ್ಲಿ ಬರೆಸಿದ್ದೇನೆ ಎಂದರೆ ಸರಿ. ಆನಂತರ ನಾನು ಬುರ್ಲಟ್ಟಿ ಗ್ರಾಮಕ್ಕೆ ಹೋಗಿಲ್ಲ ಎಂದರೆ ಸರಿ. ನನ್ನ ಮತ್ತು 3ನೇ ಪ್ರತಿವಾದಿಯ ಮದುವೆ 1997 ರಲ್ಲಿ ಆಗಿದೆ ಎಂದರೆ ಸರಿಯಲ್ಲ. ನನ್ನ ಮತ್ತು 3ನೇ ಪ್ರತಿವಾದಿಯ ಮದುವೆ 1997 ರಲ್ಲಿ ಆಗಿದ್ದು ನನಗೆ ಗೊತ್ತಿದ್ದರೂ ಸಹ ಮದುವೆಯಾದ 4 ವರ್ಷದಲ್ಲಿ 1ನೇ ವಾದಿ ಜನಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವೆ ಹಾಕಲು ಮಾಹಿತಿ ನಾನೇ ಕೊಟ್ಟಿದ್ದೇನೆ. ದಾವೆಯಲ್ಲಿ ದಾವಾ ಸ್ವತ್ತುಗಳು ಹಿರಿಯರ ಆಸ್ತಿಗಳು ಎಂದು ಬರೆಸಿದ್ದೇನೆ ಎಂದರೆ ಸರಿ. ಹಿರಿಯರ ಆಸ್ತಿಗಳು ಎಂದರೆ ನಮ್ಮ ಮಾವ ನಿಂಗಪ್ಪನ ಆಸ್ತಿಗಳು. ನಮ್ಮ ಮಾವನ ತಂದೆಯ ಹೆಸರು ಗೂಳಪ್ಪ. ಗೂಳಪ್ಪ ಮತ್ತು ನಿಂಗಪ್ಪ ಇವರಿಗೆ ಆಸ್ತಿಗಳು ಇದ್ದವು ಎಂದು ತೋರಿಸುವ ದಾಖಲಾತಿಗಳನ್ನು ಹಾಜರುಪಡಿಸಿದ್ದರ ಬಗ್ಗೆ ನನಗೆ ನೆನಪಿಲ್ಲ. ನಮ್ಮ ಮಾವನ ತಂದೆಗೆ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ಒಟ್ಟು 35 ಎಕರೆ ಜಮೀನಿಗೆ ಈ ದಾವೆ ಹಾಕಿದ್ದೇವೆ. 3ನೇ ಪ್ರತಿವಾದಿ ಕೊಕಟನೂರಿನ ಸರ್ವೆ ನಂ.491/2ಬಿ ರಲ್ಲಿ 4 ಎಕರೆ 24 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ಆ ಆಸ್ತಿಯನ್ನು ಮಾರಾಟ ಮಾಡಿದ್ದು, ಉದ್ದೇಶ ಪೂರ್ವಕವಾಗಿ ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಅನ್ನುವುದು

ಸರಿಯಲ್ಲ. ಆಸ್ತಿ ನಂ.155 ಕ್ಷೇತ್ರ 6 ಎಕರೆ 19 ಗುಂಟೆ ಜಮೀನನ್ನು ನಮ್ಮ ಮಾವ ನಿಂಗಪ್ಪ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. 6 ಎಕರೆ 19 ಗುಂಟೆ ಜಮೀನನ್ನು ನಮ್ಮ ಮಾವ 3 ಮತ್ತು 5ನೇ ಪ್ರತಿವಾದಿಯರಿಗೆ ಜಂಟಿಯಾಗಿ ಬಿಟ್ಟುಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ನಮ್ಮ ಮಾವ ನಿಂಗಪ್ಪ ಯಾವಾಗ ಮೃತಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ಮಾವ ದಿನಾಂಕ 15-04-2010 ರಂದು ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.154/2 ಕ್ಷೇತ್ರ 14 ಎಕರೆ 29 ಗುಂಟೆಯಲ್ಲಿ 10 ಎಕರೆ ಜಮೀನನ್ನು ದಿನಾಂಕ 12-04-1991 ರಂದು 1ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 07-01-1994 ರಂದು ಅದೇ ಸರ್ವೆ ನಂಬರನಲ್ಲಿ 4 ಎಕರೆ 19 ಗುಂಟೆ ಜಮೀನನ್ನು 1ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮದುವೆಯಾಗಿರಲಿಲ್ಲ, ವಾರಸುದಾರರಿಲ್ಲದೇ ಮೃತಪಟ್ಟಿದ್ದಾನೆ ಎಂದರೆ ಸರಿ. 1ನೇ ಪ್ರತಿವಾದಿಗೆ ಅಪಘಾತವಾಗಿದ್ದು, ಅದರಿಂದ ಆತನಿಗೆ ಆರೋಗ್ಯ ಸರಿ ಇಲ್ಲದ್ದರಿಂದ ಮೃತಪಟ್ಟಿದ್ದಾನೆ ಎಂದರೆ ಸರಿ. 1ನೇ ಪ್ರತಿವಾದಿ ದಿನಾಂಕ 27-12-2023 ರಂದು ಮೃತಪಟ್ಟಿದ್ದಾನೆ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಎಂದು ಹೇಳುತ್ತಾರೆ. 1ನೇ ಪ್ರತಿವಾದಿ ಮೃತಪಡುವ ಮುಂಚೆ 7 ಎಕರೆ 3 ಗುಂಟೆ ಜಮೀನನ್ನು ಬಸವ್ವ ನಿಂಗಪ್ಪ ಯಳ್ಳೂರ ಇವರಿಗೆ ಬಿಟ್ಟುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಸವ್ವ ಯಳ್ಳೂರ ಇವಳು ಮೃತಪಟ್ಟಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಮೃತಪಟ್ಟ ನಂತರ ಅವಳ ಮಗಳು ಸಾಯವ್ವ ವಾರಸಾ ಆಧಾರದ ಮೇಲೆ ತನ್ನ ಹೆಸರಿನಲ್ಲಿ ಜಮೀನನ್ನು ವರ್ಗಾವಣೆ ಮಾಡಿಕೊಂಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಸಾಯವ್ವ ಇವಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಗೆ ಅಪಘಾತವಾಗಿದ್ದರಿಂದ ಚಿಕಿತ್ಸೆಗಾಗಿ ಹಣದ ಅವಶ್ಯಕತೆ ಇದ್ದುದರಿಂದ 7 ಎಕರೆ 3 ಗುಂಟೆ ಜಮೀನನ್ನು ನಿಂಗರಾಜ ಯಳ್ಳೂರ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ನಿಂಗರಾಜ ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಏಕತ್ರ ಕುಟುಂಬದ ಆದಾಯದಿಂದ ಆಸ್ತಿಗಳನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದು ದಾವೆಯಲ್ಲಿ ಬರೆಸಿದ್ದರ ಬಗ್ಗೆ ನನಗೆ ನೆನಪಿಲ್ಲ. ಆ ರೀತಿ ಬರೆಸಿಲ್ಲ ಎಂದರೆ ಸರಿಯಲ್ಲ. 1981 ರಲ್ಲಿ ಸರ್ವೆ ನಂ.354/2ಅ+2ಇ/1 ಕ್ಷೇತ್ರ 5 ಎಕರೆ 29 ಗುಂಟೆ ಜಮೀನನ್ನು ನಮ್ಮ ಮಾವ

ನಿಂಗಪ್ಪ ಮತ್ತು ಶಿವಾಜಿ ಲಕ್ಷ್ಮಣ ಕೋತ ಇವರು ಸೇರಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿ. ಆನಂತರ ಸದರಿ ಜಮೀನಿನಲ್ಲಿ 2 ಎಕರೆ 31 ಗುಂಟೆ ನಮ್ಮ ಮಾವನಿಗೆ ಮತ್ತು 2 ಎಕರೆ 31 ಗುಂಟೆ ಜಮೀನು ಶಿವಾಜಿ ಇವರಿಗೆ ಆಗಿದೆ ಎಂದರೆ ಸರಿ. ಸರ್ವೆ ನಂ.355 ಕ್ಷೇತ್ರ 7 ಎಕರೆ 15 ಗುಂಟೆ ಜಮೀನನ್ನು 5ನೇ ಪ್ರತಿವಾದಿ ತನ್ನ ಸ್ವಂತ ದುಡಿಮೆಯಿಂದ ದಿನಾಂಕ 29-04-1974 ರಂದು ರೂ.3,500/- ಗಳಿಗೆ ಮುರಾರಿ ನಿಂಗಪ್ಪ ಪಂಡಗಾವಿ ಇವರಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.468/2 ಕ್ಷೇತ್ರ 5 ಎಕರೆ 10 ಗುಂಟೆ ಜಮೀನನ್ನು ನಮ್ಮ ಮಾವ 3ನೇ ಪ್ರತಿವಾದಿಗೆ ವರ್ಗಾವಣೆ ಮಾಡಿದ್ದು, ಆನಂತರ 3ನೇ ಪ್ರತಿವಾದಿ 5ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. 8ನೇ ಪ್ರತಿವಾದಿಯನ್ನು ಅವರ ಗಂಡನ ಮನೆಯವರು ಹೊರಗೆ ಹಾಕಿದ್ದರಿಂದ ಸದರಿ 5 ಎಕರೆ 10 ಗುಂಟೆ ಜಮೀನನ್ನು 5ನೇ ಪ್ರತಿವಾದಿ 8ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನಗೆ ಮದುವೆಯನ್ನು 15 ವರ್ಷ ವಯಸ್ಸಿದ್ದಾಗ ಆಗಿದೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆ ಆಗುವ ಮುಂಚೆ 3ನೇ ಪ್ರತಿವಾದಿ ಗುರವ್ವ ಇವಳನ್ನು ಮದುವೆಯಾಗಿದ್ದಾನೆ ಎಂದರೆ ಸರಿಯಲ್ಲ. ನಾನು, 3ನೇ ಪ್ರತಿವಾದಿ ಮತ್ತು ಗುರವ್ವ ಸೇರಿ ಪ್ರತಿವಾದಿ ನಂ.1 ಮತ್ತು 5 ರವರ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ 2012 ರಲ್ಲಿ ಈ ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಪ್ರತಿವಾದಿ ನಂ.5, 7, 8 ಇವರು ಪ್ರತಿವಾದ ಪತ್ರದ ಪ್ರತಿಯನ್ನು ನನಗೆ ಕೊಟ್ಟಿಲ್ಲ ಎಂದು ಬರೆಸಿಲ್ಲ. ದಿನಾಂಕ 21-11-2024 ರಂದು ನಾನು ನ್ಯಾಯಾಲಯಕ್ಕೆ ಬಂದಿರಲಿಲ್ಲ ಅನ್ನುವುದು ಸರಿಯಲ್ಲ. ಆ ದಿನ ನಮ್ಮ ವಕೀಲರು ಸಹ ನ್ಯಾಯಾಲಯದಲ್ಲಿ ಹಾಜರಿರಲಿಲ್ಲ ಅನ್ನುವುದು ಸರಿಯಲ್ಲ. ಪ್ರತಿವಾದಿ ನಂ.5, 7, 8 ರ ವಕೀಲರು ಪ್ರತಿವಾದ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸದರಿ ಪ್ರತಿವಾದ ಪತ್ರದ ಮೇಲೆ ವಾದಿ ಪರ ವಕೀಲರು ಹಾಜರಿಲ್ಲ ಎಂದು ನಮೂದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈಗ ನಾನು ಓಣಿ ವಕೀಲರನ್ನು ನಮ್ಮ ಪರವಾಗಿ ನೇಮಕ ಮಾಡಿದ್ದೇವೆ. ಸದರಿಯವರು ಜಮಖಂಡಿಯಲ್ಲಿ ವಾಸವಾಗಿದ್ದಾರೆ. ಓಣಿ ವಕೀಲರನ್ನು ಬಿಟ್ಟು ಬೇರೆ ವಕೀಲರನ್ನು ನಾನು ನೇಮಕ ಮಾಡಿಲ್ಲ. ಶ್ರೀ.ಎಸ್ ಬಿ ಹಿರೇಮಠ ವಕೀಲರು ನನಗೆ ಪರಿಚಯ ಇದೆ. ಸದರಿ ವಕೀಲರು ಧಾರವಾಡದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸದರಿಯವರು ಪ್ರತಿ ಮುದ್ದತ್ತಿನಂದು ದಾವೆ ನಡೆಸಲು ಬಂದಿಲ್ಲ ಎಂದರೆ ಸರಿ. ದಾವಾ

ಸ್ವತ್ತುಗಳಲ್ಲಿ ಎರಡು ಆಸ್ತಿಗಳು ನಮ್ಮ ಮಾವ ನಿಂಗಪ್ಪನ ಆಸ್ತಿಗಳು ಮತ್ತು ಇನ್ನುಳಿದ ಆಸ್ತಿಗಳು ಪ್ರತಿವಾದಿ ನಂ.1 ಮತ್ತು 5 ರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ನಮ್ಮ ಮದುವೆಗಿಂತ ಮುಂಚೆಯೇ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಹಿರಿಯರ ಆಸ್ತಿಗಳು ಅಲ್ಲ, ಅವುಗಳಲ್ಲಿ ನಮಗೆ ಯಾವುದೇ ಭಾಗ ಇಲ್ಲ ಅನ್ನುವುದು ಸರಿಯಲ್ಲ. ನಾನು, 3ನೇ ಪ್ರತಿವಾದಿ ಮತ್ತು ಗುರವ್ವ ಸೇರಿ ಪ್ರತಿವಾದಿ ನಂ.1 ಮತ್ತು 5 ರವರ ಆಸ್ತಿಗಳನ್ನು ಎತ್ತಿ ಹಾಕುವ ಉದ್ದೇಶದಿಂದ 2012 ರಲ್ಲಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 2012 ರ ನಂತರ ಈ ದಾವೆ ಈ ಹಿಂದೆ ತೀರ್ಪು ಆಗುವವರೆಗೂ 3ನೇ ಪ್ರತಿವಾದಿಯೇ ನೋಡಿಕೊಂಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. 3ನೇ ಪ್ರತಿವಾದಿ ಈದಾವೆಯನ್ನು ನೋಡಿಕೊಳ್ಳುತ್ತಿದ್ದುದರಿಂದ ಪ್ರತಿವಾದಿ ನಂ.1 ಮತ್ತು 5 ರವರು ಪ್ರತಿವಾದ ಪತ್ರ ಹಾಕದೇ ಇದ್ದುದರಿಂದ ಈ ದಾವೆ ಡಿಕ್ರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾವು ಎಫ್ ಡಿ ಪಿ ಕೇಸನ್ನು ಹಾಕಿದ ನಂತರ 1 ಮತ್ತು 5ನೇ ಪ್ರತಿವಾದಿಯರಿಗೆ ಗೊತ್ತಾದ ನಂತರ ಸದರಿಯವರು ನ್ಯಾಯಾಲಯಕ್ಕೆ ಬಂದು ದಾಖಲಾತಿಗಳನ್ನು ಪಡೆದುಕೊಂಡು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ ಆದೇಶ ಆದ ನಂತರ ಪ್ರತಿವಾದಿ ನಂ.1 ಮತ್ತು 5 ರವರು ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದು ನೋಟೀಸು ಬಂದಿದ್ದವು ಎಂದರೆ ಸರಿ. ನಂತರ ಸದರಿ ಮೇಲ್ಮನವಿಯಲ್ಲಿ ಪ್ರತಿವಾದಿ ನಂ.1 ಮತ್ತು 5 ರವರಿಗೆ ಪ್ರತಿವಾದ ಪತ್ರ ಸಲ್ಲಿಸಲು ಮತ್ತು ಉಭಯ ಪಕ್ಷದವರಿಗೆ ಸಾಕ್ಷಿ ಮಾಡಿಸಲು ಅವಕಾಶ ಕೊಟ್ಟು, ಪುನರ್ ಪರಿಶೀಲನೆಗಾಗಿ ದಾವೆಯನ್ನು ಈ ನ್ಯಾಯಾಲಯಕ್ಕೆ ಕಳುಹಿಸಿದ್ದಾರೆ ಎಂದರೆ ಸರಿ. ಸದರಿ ದಾವೆ ಮರಳಿ ಬಂದ ನಂತರ ನಾನು ಯಾವುದೇ ದಾವಾ ಪತ್ರದಲ್ಲಿ ತಿದ್ದುಪಡಿ ಮಾಡಿಕೊಳ್ಳದೇ ನನ್ನ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಹೊಸ ವಿಷಯಗಳನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಭಾಗ ಬರುವುದಿಲ್ಲ ಎಂದು ಗೊತ್ತಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.